**CMRIT Internal Smart India Hackathon 2022**

**Publication: Prajavani**

**Date 27-03-22 Page 03**

# ಸಿಎಂಆರ್‌ಐಟಿಯಲ್ಲಿ ಹ್ಯಾಕಥಾನ್

ಬೆಂಗಳೂರು: ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯ ಆಯೋಜಿಸಿದ್ದ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್‌ನಲ್ಲಿ ವಿವಿಧ ವಿಭಾಗಗಳ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸೃಜನಶೀಲ ಯೋಜನೆಗಳ ಮೂಲಕ ಗಮನ ಸೆಳೆದರು.

ಭಾಗವಹಿಸಿದ್ದ 48 ತಂಡಗಳೂ ವಿಭಿನ್ನವಾದ ಯೋಜನೆಗಳನ್ನು ಸಿದ್ಧಪಡಿಸಿದ್ದವು. ಕಲ್ಲಿದ್ದಲು ಗಣಿ ಕಾರ್ಮಿಕರ ಸುರಕ್ಷತೆಗಾಗಿ ಸಿದ್ಧಪಡಿಸ-ಲಾಗಿದ್ದ 'ಸ್ಮಾರ್ಟ್ ಉಡುಪು', ಭಾರಿ ವಾಹನಗಳನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗಿದ್ದ 'ಸ್ವಯಂ ಚಾಲಿತ ಟಯರ್ ಬದಲಾವಣೆ ಯಂತ್ರ', ಅಪಘಾತ ಪತ್ತೆಗಾಗಿ ಅನ್ವೇಷಿಸ-ಲಾಗಿದ್ದ 'ಮೊಬೈಲ್ ಅಪ್ಲಿಕೇಷನ್' ತೀರ್ಪುಗಾರರ ಮೆಚ್ಚುಗೆಗೆ ಪಾತ್ರವಾದವು.

ಹ್ಯಾಕಥಾನ್‌ನಲ್ಲಿ ಪಾಲ್ಗೊಂಡಿದ್ದ ತಂಡಗಳ ಪೈಕಿ 15 ತಂಡಗಳು ಮುಂದಿನ ಸುತ್ತಿಗೆ ಅರ್ಹತೆ ಪಡೆದವು. ಕಾಲೇಜಿನ ಪ್ರಾಂಶುಪಾಲ ಡಾ.ಸಂಜಯ್ ಜೈನ್, ಪ್ರಾಧ್ಯಾಪಕಿ ಡಾ.ಶರ್ಮಿಳಾ ಇದ್ದರು.